OS 100/2014
PW:03
ಲಕ್ಷಣ್

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 20-09-2022**

**ಪಾಟೀ ಸವಾಲು : ಶ್ರೀ ಜಿ.ವಿ.ಜಿ ಪ್ರತಿವಾದಿಗಳ ಪರ ವಕೀಲರಿಂದಃ**

ವಾದಿ ಹಾಗೂ ಪ್ರತಿವಾದಿಗಳು 34 ವರ್ಷಗಳಿಂದ ಸಂಬಂಧಿಕರು. ನನ್ನ ಅಕ್ಕಳನ್ನು 1 ನೇ ಪ್ರತಿವಾದಿಗೆ ಕೊಟ್ಟು ವಿವಾಹ ಮಾಡಿದ್ದೇವೆ. ಕುಟುಂಬದಲ್ಲಿ ನಡೆಯುವ ವಿಚಾರಗಳ ಬಗ್ಗೆ ನನಗೆ ಅರಿವಿದೆ. 2, 3 ನೇ ಪ್ರತಿವಾದಿಗಳು ಹಾಗೂ 2 ನೇ ಪ್ರತಿವಾದಿಯ ಹೆಂಡತಿಯು 1995 ನೇ ಇಸವಿಯಿಂದ ಮಾರಸಂದ್ರ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. 2, 3 ನೇ ಪ್ರತಿವಾದಿಗಳು ಹಾಗೂ 2 ನೇ ಪ್ರತಿವಾದಿಯ ಹೆಂಡತಿ ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನನ್ನ ಅಕ್ಕ ಹಾಗೂ ಭಾವ 2 ಮತ್ತು 3 ನೇ ಪ್ರತಿವಾದಿಗಳ ಜೊತೆ ವಾಸವಾಗಿದ್ದರು ಎಂದರೆ ಸರಿಯಲ್ಲ. 2, 3 ನೇ ಪ್ರತಿವಾದಿಗಳು ಹಾಗೂ 2 ನೇ ಪ್ರತಿವಾದಿಯ ಹೆಂಡತಿ ರವರುಗಳು ದಾವಾ ಐಟಂ ಸಂಖ್ಯೆ 1 ನೇ ಸ್ವತ್ತನ್ನು ತಮ್ಮ ಸ್ವಂತ ಸಂಪಾದನೆಯಿಂದ ಖರೀದಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸ್ವತ್ತನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿತ್ತು ಎಂದು ನುಡಿಯುತ್ತಾರೆ. ದಾವಾ ಐಟಂ ಸಂಖ್ಯೆ 1 ನೇ ಸ್ವತ್ತಿನಲ್ಲಿ 2, 3 ನೇ ಪ್ರತಿವಾದಿಗಳು ಹಾಗೂ 2 ನೇ ಪ್ರತಿವಾದಿಯ

ಹೆಂಡತಿ ರವರು ಸೇರಿ ಮನೆಯನ್ನು ನಿರ್ಮಿಸಿದ್ದಾರೆ ಎಂದರೆ ಸಾಕ್ಷಿಯು ಒಟ್ಟು ಕುಟಂಬದ ಸದಸ್ಯರೆಲ್ಲರೂ ಸೇರಿ ಮನೆಯನ್ನು ನಿರ್ಮಿಸಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ಸಂಖ್ಯೆ 1 ನೇ ಸ್ವತ್ತನ್ನು 1 ನೇ ಪ್ರತಿವಾದಿಯು 2 ಮತ್ತು 3 ನೇ ಪ್ರತಿವಾದಿಗಳ ಮೇಲಿನ ಪ್ರೀತಿ ವಿಶ್ವಾಸದಿಂದ ಹಾಗೂ ಸದರಿ ಸ್ವತ್ತನ್ನು ಖರೀದಿಸಲು 2 ಮತ್ತು 3 ನೇ ಪ್ರತಿವಾದಿಗಳು ಹಣದ ಸಹಾಯ ನೀಡಿದ್ದರಿಂದ ಅವರ ಪರವಾಗಿ ದಾನ ಮಾಡಿದ್ದರು ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳು ದಾವಾ ಐಟಂ 1 ರ ಸ್ವತ್ತಿನಲ್ಲಿ ಸಂಪೂರ್ಣ ಹಕ್ಕನ್ನು ಹೊಂದಿರುವುದರಿಂದ, ಸದರಿ ಸ್ವತ್ತನ್ನು 4 ನೇ ಪ್ರತಿವಾದಿಯ ಪರವಾಗಿ ನೋಂದಾಯಿತ ಕ್ರಯ ಪತ್ರದ ಮೂಲಕ ದಿನಾಂಕ 24.01.2014 ರಂದು ನೀಡಿದ್ದರು ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಸ್ವತ್ತನ್ನು ಮಾರಾಟ ಮಾಡಲು ಅಧಿಕಾರವಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು 1 ರಿಂದ 3 ನೇ ಪ್ರತಿವಾದಿಗಳ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ಒಟ್ಟು ಕುಟುಂಬದಲ್ಲಿ ಮಾನಸ್ತಾಪಗಳು ಉಂಟಾದ ಕಾರಣ ವಾದಿಯು ಪ್ರತ್ಯೇಕವಾಗಿ ಹೋಗಿದ್ದರು ಎಂದು ತಿಳಿಸಿದ್ದು, ಸುಮಾರು 10 ವರ್ಷಗಳಿಂದ ವಾದಿಯು ಒಟ್ಟು ಕುಟಂಬದಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂದು ನುಡಿಯುತ್ತಾರೆ. ವಾದಿ, ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ಇರುವ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ. 2004 ನೇ ಇಸವಿಯಿಂದ ವಾದಿ ಹಾಗೂ

ಪ್ರತಿವಾದಿಗಳು ಒಟ್ಟು ಕುಟುಂಬದಿಂದ ಹೊರಗೆ ಬಂದಿರುತ್ತಾರೆ. ಅಂದಿನಿಂದ ಇಲ್ಲಿಯವರೆವಿಗೂ ಅವರುಗಳು ಒಟ್ಟು ಕುಟುಂಬದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿಯು ಒಟ್ಟು ಕುಟುಂಬದಿಂದ ಹೊರಗೆ ಬಂದ ನಂತರ ವಿಧುರಾಶ್ವಥ ಮತ್ತು ಹಾಲಗಾನಹಳ್ಳಿ ಇತರೆ ಕಡೆಗಳಲ್ಲಿ ಸ್ವತ್ತುಗಳನ್ನು ಪ್ರತ್ಯೇಕವಾಗಿ ಮಾಡಿಕೊಂಡಿದ್ದಾರೆ ಎಂದರೆ ಸರಿ. ನನ್ನ ಪ್ರಮಾಣಪತ್ರದಲ್ಲಿ ಹೇಳಿರುವಂತೆ ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳು ಗಣೇಶ ವಿಗ್ರಹಗಳನ್ನು ಮಾರಾಟ ಮಾಡಿದ ಹಣದಿಂದ ದಾವಾ ಐಟಂ ಸಂಖ್ಯೆ 1 ರ ಸ್ವತ್ತನ್ನು ಜಂಟಿಯಾಗಿ ಖರೀದಿ ಮಾಡಿದ್ದಾಗಿ ಹೇಳಿದ್ದು, ಆದರೆ ಅವರು ಗಣೇಶ ವಿಗ್ರಹಗಳನ್ನು ಮಾರಾಟ ಮಾಡುತ್ತಿದ್ದ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ವಾದಿಯು ಗಣೇಶ ವಿಗ್ರಹಗಳನ್ನು ಮಾಡಲು ಬಣ್ಣ ಇತ್ಯಾದಿ ವಸ್ತುಗಳನ್ನು ಖರೀದಿಸಿದ ಬಗ್ಗೆ ರಸೀದಿಗಳನ್ನು ನಾನು ನೋಡಿರುವುದಿಲ್ಲ. ಹಾಲಗಾನಹಳ್ಳಿಯಲ್ಲಿ ವಾದಿಯು ಗಣೇಶ ವಿಗ್ರಹಗಳನ್ನು ಮಾಡುತ್ತಿದ್ದರು. ವಾದಿಗೆ ಗಣೇಶ ವಿಗ್ರಹಗಳನ್ನು ಮಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳ ಕಸುಬು ಕುಂಬಾರಿಕೆ ಎಂದರೆ ಸಾಕ್ಷಿಯು ಆ ಕಸುಬು ನಿಂತಹೋದ ಕಾರಣ ಗಣೇಶ ವಿಗ್ರಹಗಳನ್ನು ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

1 ರಿಂದ 3 ನೇ ಪ್ರತಿವಾದಿಗಳು ಹಾಲಗಾನಹಳ್ಳಿಯಲ್ಲಿ ವಾಸವಾಗಿಲ್ಲ ಬದಲಿಗೆ ವಿದುರಾಶ್ವಥದಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ಹೊಂದಾಣಿಕೆ ತಪ್ಪಿದಾಗಿನಿಂದ ಅವರು ಪ್ರತ್ಯೇಕವಾಗಿ ವಿಧುರಾಶ್ವಥದಲ್ಲಿ ವಾಸವಾಗಿರುವುದಾಗಿ ನುಡಿಯುತ್ತಾರೆ.

ಮಾರಸಂದ್ರ ಗ್ರಾಮದ ಸರ್ವೆ ನಂಬರ್ 41 ರಲ್ಲಿನ ನಿವೇಶನ ಸಂಖ್ಯೆ 53/5, ಅದು ನನ್ನ ತಾಯಿಯ ಹೆಸರಿನಲ್ಲಿದ್ದು, ಸದರಿ ಸ್ವತ್ತನ್ನು ನನ್ನ ಅಕ್ಕನವರಾದ 1 ನೇ ಪ್ರತಿವಾದಿಯ ಹೆಂಡತಿಗೆ ತಿಳಿಯದಂತೆ ಹಾಗೂ ಅವರಿಗೆ ಭಾಗಾಂಶ ನೀಡದೆ ನಾವು ಮಾರಾಟ ಮಾಡಿದ್ದು, ನಂತರ ಸದರಿ ವಿಚಾರವು ನನ್ನ ಅಕ್ಕನಿಗೆ ತಿಳಿದ ನಂತರ ಅವರು ಭಾಗಾಂಶ ಕೇಳಿದ್ದು, ಆದುದರಿಂದ ನನ್ನ ಅಕ್ಕನಿಗೂ ಹಾಗೂ ನನಗೂ ಮನಸ್ತಾಪ ಉಂಟಾಯಿತು ಎಂದರೆ ಸರಿ. ಸಾಕ್ಷಿ ಮುಂದುವರೆದು ಭಾಗಾಂಶ ನೀಡಿದ್ದೇವೆ ಎಂದು ನುಡಿಯುತ್ತಾರೆ. ಈ ಒಂದು ಮನಸ್ತಾಪದಿಂದಲೇ ನನ್ನ ಅಕ್ಕನ ಕುಟುಂಬಕ್ಕೆ ತೊಂದರೆ ನೀಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ವಾದಿಗೆ ದುಷ್ಪ್ರೇರಣೆ ನೀಡಿ ಈ ದಾವೆಯನ್ನು ಸಲ್ಲಿಸಲು ಕಾರಣನಾಗಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಎಂದಿಗೂ ಸಹ ದಾವಾ ಐಟಂ ಸಂಖ್ಯೆ 1 ನೇ ಸ್ವತ್ತನ್ನು ಖರೀದಿಸಲು ಪ್ರತಿವಾದಿಗಳಿಗೆ ಹಣಕಾಸು ನೀಡಿಲ್ಲ ಎಂದರೆ ಸರಿಯಲ್ಲ.

ಹಾಲಗಾನಹಳ್ಳಿಯಲ್ಲಿರುವ ದಾವಾ ಐಟಂ ಸಂಖ್ಯೆ 2 ನೇ ಸ್ವತ್ತು 1 ನೇ ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸರಿ. ಆದುದರಿಂದ, ಸದರಿ

ಐಟಂ ಸಂಖ್ಯೆ 1 ಮತ್ತು 2 ರ ಸ್ವತ್ತಿನಲ್ಲಿ ಯಾವುದೇ ಹಕ್ಕು, ಅಧಿಕಾರ, ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಐಟಂ 1 ಮತ್ತು 2 ರ ಸ್ವತ್ತಿನಲ್ಲಿ ವಾದಿಗೆ ಯಾವುದೇ ಹಕ್ಕು, ಅಧಿಕಾರ, ಭಾಗಾಂಶದ ಹಕ್ಕು ಇಲ್ಲದಿದ್ದರು ಈ ದಾವೆಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ಇಲ್ಲದಿರುವ ಕಾರಣ ವಾದಿಯು ವಿದುರಾಶ್ವಥ, ಹಾಲಗಾನಹಳ್ಳಿ ಹಾಗೂ ಇತರೆ ಕಡೆಗಳಲ್ಲಿ ಸ್ವತ್ತುಗಳನ್ನು ಪ್ರತ್ಯೇಕವಾಗಿ ಅರ್ಜಿಸಿದ್ದಾರೆ ಮತ್ತು ಸದರಿ ಸ್ವುಗಳನ್ನು ಈ ದಾವೆಗಳಲ್ಲಿ ಅವಶ್ಯಕ ಸ್ವತ್ತುಗಳಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನನಗೂ ಹಾಗೂ 1 ನೇ ಪ್ರತಿವಾದಿಯ ಹೆಂಡತಿ ನನ್ನ ಅಕ್ಕನವರಿಗೂ ಮನಸ್ತಾಪ ಇರುವ ಕಾರಣ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇದೆ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗೌರಿಬಿದನೂರು